# ಅಖಿಲ ಭಾರತ ಮಟ್ಟದ ಎನ್‌ಐಟಿ ಕ್ರೀಡಾಕೂಟಕ್ಕೆ ಚಾಲನೆ

■ ವಿಕ ಸುದ್ದಿಲೋಕ ಸುರತ್ಕಲ್

''ಭಾರತ ಸರಕಾರ ಖೇಲೋ ಇಂಡಿಯಾ, ಫಿಟ್ ಇಂಡಿಯದಂತಹ ಕ್ರೀಡಾಕೂಟಗಳು ಯುವಕರಲ್ಲಿ ತಂಡ ಮನೋಭಾವಕ್ಕೆ ಸ್ಫೂರ್ತಿ ನೀಡುತ್ತಿವೆ. ಇದರ ಸದುಪಯೋಗ ಯುವಕರು ಮಾಡಿಕೊಳ್ಳಬೇಕಾಗಿದೆ'' ಎಂದು ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ವೇಟ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ವಿಜೇತ ಪುಷ್ಪರಾಜ ಹೆಗ್ಡೆ ಹೇಳಿದರು.

ಎನ್‌ಐಟಿಕೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಮಟ್ಟದ 25 ಎನ್‌ಐಟಿಗಳ ಮೂರು ದಿನದ ಕಬಡ್ಡಿ, ವಾಲಿಬಾಲ್, ಯೋಗ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಎನ್‌ಐಟಿಕೆ ಪ್ರಭಾರ ನಿರ್ದೇಶಕ ಜೆಸಿ ಮೋಹನ್ ಕುಮಾರ್, ಎಐಐ ಎನ್ ಎಸ್‌ಎಂ ತಟಸ್ಥ ವೀಕ್ಷಕ ಕುಲದೀಪ್ ಸಿಂಗ್, ಡೀನ್ ಪ್ರೊ.ನರೇಂದ್ರನಾಥ್ ಮತ್ತಿತರರು ಉಪಸ್ಥಿತರಿದ್ದರು.

Vijay Karnataka, Date: 21/01/23, p. no - 08